# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-7291/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 11/04/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಡಾ. ಶ್ರೀಧರ ರಾವ್, ಬೆಳ್ಮಾರ್, ಆರೂರು ಗ್ರಾಮ ಮತ್ತು ಅಂಚೆ, ಉಡುಪಿ ತಾಲ್ಲೂಕು ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಶ್ರೀಧರ್ ರಾವ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಶ್ರೀ ಸುಧಾಕರ್ ಭಟ್ ಇವರಿಂದ ದಿ:24/02/2014 ರಂದು ಉಡುಪಿ ತಾಲ್ಲೂಕಿನ ಕುಂಜಾಲು ಗ್ರಾಮದ ಸರ್ವೆ ನಂ.104/36, 104/44 ಮತ್ತು 104/45ರ ಜಮೀನನ್ನು ಹಾಗೂ ಅದರಲ್ಲಿನ ಡೋರ್ ನಂ. 4-58ರ ಮನೆಯನ್ನು ದೂರುದಾರರು ಖರೀದಿಸಿರುತ್ತಾರೆ. ಇದಾದ ನಂತರ ಸದರಿ ಮನೆಯನ್ನು ಮೇಲ್ಭಾಗದಲ್ಲಿ ಜೀರ್ಣೋದ್ಧಾರ ಮಾಡುವ ಉದ್ದೇಶದಿಂದ ಪರವಾನಗೆ ಕೋರಿ ಎದುರುದಾರರನ್ನು ಕೇಳಲಾಗಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ಎದುರುದಾರರು ಹೊಸ ತಳಪಾಯ ಹಾಕದೇ ಇರುವುದರಿಂದ ಪರವಾನಗೆ ಬೇಕಾಗಿಲ್ಲವೆಂದು ತಿಳಿಸಿರುತ್ತಾರೆಂದು, ಅದರಂತೆ ಮನೆಯನ್ನು ನವೀಕರಿಸಿ ವಿದ್ಯುತ್ ಸಂಪರ್ಕ ಪಡೆಯಲು ನಿರಾಕ್ಷೇಪಣಾ ಪತ್ರ ನೀಡಲು ಕೋರಿದಾಗ ಎದುರುದಾರರು ಲಂಚ ಬೇಡಿದರೆಂದು ಹಾಗೂ ತಮ್ಮ ಮನೆಯ ಬಳಿ ಇರುವ ಶ್ರೀ ಗಣೇಶ ಪೂಜಾರಿ ಇವರ ಒತ್ತಡದಂತೆ ಅವರ ಮನೆ ಮುಂದಿನ ಕಾಲುದಾರಿಗೆ ರಸ್ತೆ ಮಾಡಲು ದೂರುದಾರರ ಜಾಗದಲ್ಲಿ ಜಾಗ ಬಿಡಬೇಕೆಂದು ಎದುರುದಾರರು ಒತ್ತಾಯಿಸುತ್ತಿದ್ದಾರೆಂದು, ತಾನು ಕೋರಿರುವ ಜಾಗವನ್ನು ಬಿಡದೇ ಇದ್ದ ಕಾರಣ, ತನಗೆ ವಿದ್ಯುತ್ ಸಂಪರ್ಕ ಪಡೆಯಲು ನಿರಾಕ್ಷೇಪಣಾ ಪತ್ರ ನೀಡಲು ತೊಂದರೆ ಮಾಡುತ್ತಿರುತ್ತಾರೆಂದು, ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಶ್ರೀ ಎಂ. ಶ್ರೀಧರ್ ರಾವ್ ಇವರು ದಿ:26/05/2014 ರಂದು ಆಸ್ತಿ ತೆರಿಗೆ ದಾಖಲಾತಿ ಬದಲಾವಣೆಗೆ ಸೂಕ್ತ ದಾಖಲೆಗಳೊಂದಿಗೆ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದ್ದು, ಅವರ ಕೋರಿಕೆಯಂತೆ ದಿ:19/06/2014 ರಂದು ಜರುಗಿದ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಮನೆ ತೆರಿಗೆ ಖಾತೆ ಬದಲಾವಣೆ ಮಾಡಿ ಅನುಮೋದಿಸಲಾಗಿರುತ್ತದೆ. ಅದರಂತೆ, ದಿ:15/07/2014 ರಂದು ಮನೆ ತೆರಿಗೆ ಬದಲಾವಣೆ ಆಧಾರದ ಮೇಲೆ ದೂರುದಾರರಿಗೆ ವಿದ್ಯುತ್ ನಿರಾಕ್ಷೇಪಣಾ ಪತ್ರ ನೀಡಲಾಗಿರುತ್ತದೆ. ಮನೆ ದುರಸ್ಥಿಗೆ ಸಂಬಂಧಿಸಿದಂತೆ ದೂರುದಾರರು ದಿ:28/07/2014 ರಂದು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ಜೊತೆಗೆ ಸರ್ಕಾರವು ನಿಗಧಿಪಡಿಸಿದ ಯಾವುದೇ ದಾಖಲೆಯನ್ನು ಸಲ್ಲಿಸದೇ ಇರುವುದರಿಂದ, ಸಕಾಲದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗಿರುತ್ತದೆ. ಅರ್ಜಿ ತಿರಸ್ಕರಿಸಿದ ಬಗ್ಗೆ ಸಕಾಲ ಅರ್ಜಿಯ ಸ್ವೀಕೃತಿಯನ್ನು ಲಗತ್ತಿಸಿರುತ್ತದೆ. ಶ್ರೀ ಶ್ರೀಧರ್ ರಾವ್ (ದೂರುದಾರರು) ಇವರ ವಾಸ್ತವ್ಯ ಕಟ್ಟಡ ಸಂಖ್ಯೆ: 4–58 ಕ್ಕೆ ವಿದ್ಯುತ್ ಅಳವಡಿಸಲು ವಿದ್ಯುತ್ ನಿರಾಕ್ಷೇಪಣಾ ಪತ್ರವನ್ನು ಪಡೆದಿದ್ದು, ಸದರಿ ದೂರುದಾರರು ತಮ್ಮ ಕಟ್ಟಡವನ್ನು ಪುನರ್ ನವೀಕರಣವನ್ನು ಕೈಗೊಂಡಿದ್ದು, ಇದಕ್ಕೆ ಗ್ರಾಮ ಪಂಚಾಯತಿ ವತಿಯಿಂದ ಕಟ್ಟಡ ನವೀಕರಣ ಪರವಾನಗೆಯನ್ನು ಪಡೆದುಕೊಂಡಿರುವುದಿಲ್ಲ. ಹೀಗಾಗಿ ವಾಸ್ತವ್ಯದ ಕಟ್ಟಡ ಸಂಖ್ಯೆ:4–58 ಕ್ಕೆ ನೀಡಿರುವ ನಿರಾಕ್ಷೇಪಣಾ ಪತ್ರವನ್ನು ನವೀಕರಣಗೊಳ್ಳುತ್ತಿರುವ ಕಟ್ಟಡಕ್ಕೆ ಪರಿಗಣಿಸಬಾರದೆಂದು ಈ ಬಗ್ಗೆ ಗ್ರಾಮ ಪಂಚಾಯತಿಯಿಂದ ನಿರಾಕ್ಷೇಪಣೆಯನ್ನು ವಾಪಸ್ಸು ಪಡೆಯುವ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮೆಸ್ಕಾಂ ಸಂಸ್ಥೆ ಇವರಿಗೆ ದಿ:14/10/2014 ರಂದು ಪತ್ರ ಬರೆಯಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

3. ಸದರಿ ಎದುರುದಾರರ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರ ಕರೆಯಲಾಗಿದ್ದು, ದೂರುದಾರರು ದಿ:06/01/2016 ರಂದು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುತ್ತಾರೆ. ಅದರಲ್ಲಿ, ಆರೂರು ಗ್ರಾಮದ ಬೆಳ್ಮಾರದಲ್ಲಿರುವ ಸರ್ವೇ ನಂ.104/36 ಇಲ್ಲಿರುವ ಕಟ್ಟಡ ಸಂ:4–58 ಅನ್ನು ಖರೀದಿಸಿದೊಡನೆ ತುಂಬಾ ಹಳೇ ಹೆಂಚಿನ ಮನೆಯಲ್ಲಿ ತಾನು ತನ್ನ ಕುಟುಂಬದೊಂದಿಗೆ ವಾಸವಾಗಿದ್ದು, ಈ ಮನೆ ಮುಂಭಾಗದ ಹೆಂಚಿನ ಉಪ್ಪರಿಗೆ ಕೋಣೆಗಳಲ್ಲಿ ಹಲವು ಕಡೆ ಮಳೆ ಸೋರುತ್ತಿದ್ದ ಕಾರಣ, ಅದರ ರಿಪೇರಿಗೆಂದು ಗ್ರಾಮ ಪಂಚಾಯತಿಗೆ ದಿ:05/05/2014 ರಂದು ಅರ್ಜಿ ಸಲ್ಲಿಸಿದ್ದೇನೆಂದು, ಅದನ್ನು ಪಡೆದು ಪಂಚಾಯತಿ ಅಭಿವೃದ್ದಿ ಅಧಿಕಾರಿ ಶ್ರೀ ಪ್ರಶಾಂತ್‌ರವರು ಹಳೆಯ ಹೆಂಚಿನ ಉಪ್ಪರಿಗೆ ಕೋಣೆಗಳ ಮಾಡಿನ ರಿಪೇರಿಯಾದ್ದರಿಂದ ಮತ್ತು ಹೊಸ ಪಂಚಾಂಗದ ಉದ್ದೇಶವಿಲ್ಲದೇ ಇರುವುದರಿಂದ ರಿಪೇರಿ ಕಾರ್ಯವನ್ನು ಮಾಡಬಹುದೆಂದು ಹೇಳಿರುತ್ತಾರೆ. ಅರ್ಜಿ ಸಲ್ಲಿಸಿದ ಎರಡು ತಿಂಗಳ ಒಳಗೆ

ಪಂಚಾಯತಿ ವತಿಯಿಂದ ಯಾವುದೇ ಆಕ್ಷೇಪಣೆ ಬಂದಿರಲಿಲ್ಲ. ಆದ್ದರಿಂದ, ತಾನು ರಿಪೇರಿ ಮಾಡಿಸಿರುತ್ತೇನೆಂದು ದೂರುದಾರರು ತಿಳಿಸಿರುತ್ತಾರೆ.

4. ಮುಂದುವರೆದು, ಮೇಲೆ ಹೇಳಿದ ಆಸ್ತಿಗೆ ತೆರಿಗೆ ದಾಖಲಾತಿ ಬದಲಾವಣೆಯು ಸೂಕ್ತ ದಾಖಲೆಗಳೊಂದಿಗೆ ದಿ:26/05/2014 ರಂದು ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದ್ದು, ಈ ಬದಲಾವಣೆಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶ್ರೀ ಪ್ರಶಾಂತ್ ರವರು ಪಂಚಾಯತಿ ಸದಸ್ಯರು ಮತ್ತಿತರನ್ನು ಒಪ್ಪಿಸಲು ರೂ.5000/– ಕೊಟ್ಟರೆ ಮಾತ್ರ ಕೆಲಸ ಮಾಡಿಕೊಡುವುದಾಗಿ ತಿಳಿಸಿರುತ್ತಾರೆ. ಆದರೆ, ದಿ:19/06/2014 ರಂದು ನಡೆದ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಮನೆ ತೆರಿಗೆ ಖಾತೆ ಬದಲಾವಣೆ ಮಾಡಿ ಅನುಮೋದಿಸಲಾಗಿದೆ ಎಂದು ತಿಳಿಸಿದ್ದು, ಈ ಖಾತೆ ಬದಲಾವಣೆ ಮಾಡಿರುವಂತೆ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿ ಶ್ರೀ ಪ್ರಶಾಂತ್‌ರವರು ಇಲ್ಲಿಯವರೆಗೂ ಯಾವುದೇ ದೃಢೀಕರಣ ಪತ್ರ ಮತ್ತು ಮ್ಯೂಟೇಷನ್ ಬದಲಾವಣೆ ದಾಖಲೆ ತಮಗೆ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮುಂದುವರೆದು, 2014–15ನೇ ಮತ್ತು 2015–16ನೇ ಸಾಲಿನ ತೆರಿಗೆ ನಿರ್ಧಾರಣಾ ಪಟ್ಟಿಯಲ್ಲಿ ಯಾವುದೇ ಬದಲಾವಣೆಗೊಳ್ಳದ ಜಮೀನನ್ನು ಶ್ರೀ ಸುಧಾಕರ್ ಭಟ್ ರವರ ಹೆಸರಿನಲ್ಲೇ ಮುಂದುವರೆಸಿರುತ್ತಾರೆ.

5. ದಿ:15/07/2014 ರಂದು ತನ್ನ ವಾಸ್ತವ್ಯದ ಕಟ್ಟಡಕ್ಕೆ ಅವಶ್ಯಕವಾದ ವಿದ್ಯುತ್ ನಿರಾಕ್ಷೇಪಣಾ ಪತ್ರ ನೀಡಲು ಸೂಕ್ತ ದಾಖಲೆಗಳೊಂದಿಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಅರ್ಜಿ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ. ಕನಿಷ್ಠ ರೂ.5000/– ಕೊಟ್ಟರೆ ಮಾತ್ರ ವಿದ್ಯುತ್ ನಿರಾಕ್ಷೇಪಣಾ ಪತ್ರ ನೀಡುವುದಾಗಿ ತಿಳಿಸಿದರೆಂದು, ಈಗಾಗಲೇ ಆಸ್ತಿ ತೆರಿಗೆ ಖಾತೆ ಬದಲಾವಣೆಗೆ ಹಣವನ್ನು ಪಿಡಿಓ ರವರಿಗೆ ನೀಡಲಾಗಿರುತ್ತದೆಂದು ತಿಳಿಸಿರುತ್ತಾರೆ. ಅದರಂತೆ, ತಾವು ಸಲ್ಲಿಸಿದ ಅರ್ಜಿ ಮೇರೆಗೆ ತನಗೆ ವಿದ್ಯುತ್ ಸಂಪರ್ಕ ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

6. ಅದೇ ಸಮಯದಲ್ಲಿ ದೂರುದಾರರ ಮನೆಯ ಪಕ್ಕದ ನಿವಾಸಿ ಹಾಗೂ ಗ್ರಾಮ ಪಂಚಾಯತಿ ಸದಸ್ಯ ಶ್ರೀ ಗಣೇಶ್ ಪೂಜಾರಿ ಇವರು ತಾನು ಪ್ರಭಾವಶಾಲಿ ವ್ಯಕ್ತಿ ಎಂದು ಹೇಳಿಕೊಳ್ಳುತ್ತಾ, ದೂರುದಾರರ ಸ್ಥಳದಲ್ಲಿ ಅಕ್ರಮವಾಗಿ ಮತ್ತು ಬಲಾತ್ಕಾರವಾಗಿ ತಮ್ಮ ಮನೆಗೆ ದಾರಿ ಅಗಲಗೊಳಿಸಲು ಪ್ರಾರಂಭಿಸಿರುತ್ತಾರೆ ಹಾಗೂ ಈ ಬಗ್ಗೆ ತಾವು ಲಿಖಿತ ದೂರನ್ನು ನೀಡಿದ್ದರೂ ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದರೆ, ಎದುರುದಾರರು ತಾವು (ದೂರುದಾರರು) ರಚಿಸುತ್ತಿರುವ ಕಟ್ಟಡವು ಅಕ್ರಮ ಕಟ್ಟಡವೆಂದು, ಆದ್ದರಿಂದ, ಕಟ್ಟಡ ರಚನೆಗೆ ಪರವಾನಗೆ ಬೇಕೆಂದು ತನಗೆ ತಿಳಿಸಿರುತ್ತಾರೆಂದು ತಿಳಿಸಿರುತ್ತಾರೆ.

7. ದೂರಿನಂಶಗಳನ್ನು, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ಉಡುಪಿ ತಾಲ್ಲೂಕಿನ ಕುಂಜಾಲು ಗ್ರಾಮದ ಸರ್ವೆ ನಂ.104ರ ಜಮೀನಿನಲ್ಲಿ ಡೋರ್ ನಂ:4–58ರ ಮನೆಯನ್ನು ಖರೀದಿಸಿರುತ್ತಾರೆ. (ಸದರಿ ಖರೀದಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಇದಾದ ನಂತರ ದೂರುದಾರರು ದಿ:26/05/2014 ರಂದು ಕುಂಜಾಲು ಗ್ರಾಮ ಪಂಚಾಯತಿಯ ಆರೂರು ಗ್ರಾಮದ ಬೆಳ್ಮಾರಿನ ಸರ್ವೆ ನಂ.104/36ರಲ್ಲಿ ಇರುವ ಕಟ್ಟಡ ಸಂ:4–58 ಕ್ಕೆ ಸೇರಿದ ಜಾಗವು ದೂರುದಾರರು ಶ್ರೀ ಪಿ.ಸುಧಾಕರ್ ಭಟ್ ರವರಿಂದ ಖರೀದಿಸಿದ್ದು, ಅದರಂತೆ, ಆಸ್ತಿ ತೆರಿಗೆ ಖಾತೆಯನ್ನು ತಮ್ಮ ಹೆಸರಿಗೆ ಬದಲಾವಣೆ ಮಾಡಿಕೊಡಬೇಕಾಗಿ ಕೋರಿರುತ್ತಾರೆ. (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ದೂರುದಾರರು ಕಟ್ಟಡ ಲೈಸೆನ್ಸ್‌ಗೆ ಕೋರಿ ಅರ್ಜಿ ಸಲ್ಲಿಸಿದ್ದು, ಇದಕ್ಕೆ ಕಟ್ಟಡ ಲೈಸೆನ್ಸ್ ಅನ್ನು ನೀಡದೇ ಅರ್ಜಿಯನ್ನು ತಿರಸ್ಕರಿಸಿರುವ ಬಗ್ಗೆ ನೀಡಿರುವ ಹಿಂಬರಹವನ್ನು ಹಾಜರುಪಡಿಸಲಾಗಿದೆ. ಸದರಿ ಹಿಂಬರಹದಲ್ಲಿ ದಾಖಲೆಗಳನ್ನು ನೀಡಲಾಗಿಲ್ಲವೆಂಬ ಕಾರಣಕ್ಕೆ ಅರ್ಜಿಯನ್ನು ತಿರಸ್ಕರಿಸಿರುವುದಾಗಿ ತಿಳಿಸಲಾಗಿದೆ. ಕುಂಜಾಲು ಗ್ರಾಮ ಪಂಚಾಯತಿ ವತಿಯಿಂದ ದಿ:28/07/2014 ರಂದು ದೂರುದಾರರಿಗೆ ಪತ್ರ ಬರೆದು, ದೂರುದಾರರು ಪರವಾನಗೆ ಇಲ್ಲದೇ, ಕಟ್ಟಡ ರಚನೆ ಮತ್ತು ಆವರಣ ಗೋಡೆ ನಿರ್ಮಾಣ ಮಾಡುತ್ತಿರುವುದು ಗ್ರಾಮ ಪಂಚಾಯತಿಯ ಗಮನಕ್ಕೆ ಬಂದಿರುತ್ತದೆಂದು, ಈ ಬಗ್ಗೆ ಸೂಕ್ತ ದಾಖಲೆಯನ್ನು ಸಲ್ಲಿಸಿ ಗ್ರಾಮ ಪಂಚಾಯತಿಯಿಂದ ಪರವಾನಗೆ ಪಡೆದು ಕಾಮಗಾರಿಯನ್ನು ಪ್ರಾರಂಭಿಸುವುದು ಎಂದು ತಿಳಿಸಿರುತ್ತಾರೆ. (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ದೂರುದಾರರು ದಿ:28/07/2014 ರಂದು ಅರ್ಜಿಯನ್ನು ನೀಡಿ ಕಟ್ಟಡ ಸಂ:4–58ರ ಹೆಂಚಿನ ಉಪ್ಪರಿಗೆಯನ್ನು ರಿಪೇರಿ ಮತ್ತು ನವೀಕರಣ ಮಾಡಲು ಪರವಾನಗೆ ನೀಡಬೇಕಾಗಿ ಕೋರಿರುತ್ತಾರೆ. ಹಾಗೂ ಹಿಂದಿನ ಉಪಸ್ಥಿತ ಪಂಚಾಂಗದಲ್ಲಿ ಮತ್ತು ಸುತ್ತಲಿನ ಗಡಿಯಲ್ಲಿ ಯಾವುದೇ ಬದಲಾವಣೆ ಇಲ್ಲದೇ ಇರುವ ಬಗ್ಗೆ ತಿಳಿಸಿರುತ್ತಾರೆ. (ಸದರಿ ಅರ್ಜಿಯ ಪ್ರತಿಯನ್ನು ಹಾಜರುಪಡಿಸಲಾಗಿದೆ).

8. ಕುಂಜಾಲು ಗ್ರಾಮ ಪಂಚಾಯತಿಯ ದಿ:19/06/2014 ರ ಗ್ರಾಮ ಸಭಾ ಠರಾವಿನ ಪ್ರತಿಯನ್ನು ಹಾಜರುಪಡಿಸಿದ್ದು, ಅದರಲ್ಲಿ, ಶ್ರೀ ಶ್ರೀಧರ್ ರಾವ್ ಇವರು ಆರೂರು ಗ್ರಾಮದ ಸರ್ವೆ ನಂಬರ್ 104/36ರಲ್ಲಿನ ಕಟ್ಟಡ ಸಂ:4–58 ರಲ್ಲಿನ ಕಟ್ಟಡ ಸಹಿತ ಶ್ರೀ ಸುಧಾಕರ್ ಭಟ್ ರವರಿಂದ ಖರೀದಿಸಿದ್ದು, ಈ ಬಗ್ಗೆ ಶ್ರೀ ಎಂ. ಶ್ರೀಧರ್ ರಾವ್ ಇವರ ಹೆಸರಿಗೆ ಮನೆ ತೆರಿಗೆ ಖಾತೆ ಬದಲಾವಣೆ ಮಾಡುವುದೆಂದು ಸರ್ವಾನುಮತದಿಂದ ತೀರ್ಮಾನಿಸಿರುವುದು ಕಂಡು ಬರುತ್ತದೆ. (ಸದರಿ ಠರಾವಿನ ಪ್ರತಿಯನ್ನು ಹಾಜರುಪಡಿಸಲಾಗಿದೆ). ದೂರುದಾರರು ತಮ್ಮ ಪ್ರತ್ಯುತ್ತರದೊಡನೆ ನಗರಸಭೆಯ 2014–15ನೇ ಸಾಲಿನ ಟ್ಯಾಕ್ಸ್ ಅಸೆಸ್‌ಮೆಂಟ್ ಲಿಸ್ಟ್‌ನ ಪ್ರತಿಯನ್ನು ಹಾಗೂ ದಿ:31/03/2015 ರಂದು ತೆರಿಗೆ ಪಾವತಿಸಿರುವ ರಸೀತಿಯನ್ನು ಹಾಗೂ ಆರ್‌ಡಿಪಿಆರ್‌ನ ವೆಬ್ ಸೈಟ್‌ನಿಂದ 2015–16ನೇ ಸಾಲಿನ ಕಟ್ಟಡ ಮಾಲೀಕರ

ಪಟ್ಟಿಯನ್ನು ಹಾಜರುಪಡಿಸಿದ್ದು, ಅದರಲ್ಲಿ, ಆರೂರು ಗ್ರಾಮದ ಕಟ್ಟಡ ಸಂ:4–58 ಇಂದಿಗೂ ಶ್ರೀ ಸುಧಾಕರ್ ಭಟ್ ರವರ ಹೆಸರಿನಲ್ಲಿಯೇ ಇರುವುದು ಕಂಡು ಬರುತ್ತದೆ. ಹಾಗೆಯೇ ಮೇಲೆ ಹೇಳಿದ ಮನೆ ಟ್ಯಾಕ್ಸ್ ಅಸೆಸ್‌ಮೆಂಟ್ ಲಿಸ್ಟ್‌ನಲ್ಲಿಯೂ ಸಹ ಮನೆ ನಂಬರ್ 4–58ಕ್ಕೆ ಸಂಬಂಧಿಸಿದಂತೆ ಶ್ರೀ ಸುಧಾಕರ್ ಭಟ್ ಅವರೇ ಮಾಲೀಕರೆಂದು ತೋರಿಸಿರುವುದು ಕಂಡು ಬರುತ್ತದೆ. ಈ ಎಲ್ಲ ಅಂಶಗಳನ್ನು ಪರಿಶೀಲಸಿದಲ್ಲಿ ಇದುವರೆಗೂ ಪಂಚಾಯತಿ ವತಿಯಿಂದ ಆಸ್ತಿ ಕಟ್ಟಡ ಸಂಖ್ಯೆ:4–58ರ ಆಸ್ತಿಯನ್ನು ಖರೀದಿದಾರರಾದ ಶ್ರೀ ಶ್ರೀಧರ್ ರಾವ್ ಇವರ ಹೆಸರಿಗೆ ಬದಲಾವಣೆ ಮಾಡದೇ ಇರುವುದು ಕಂಡು ಬರುತ್ತದೆ. ದೂರುದಾರರು ತಿಳಿಸಿರುವಂತೆ ಎದುರುದಾರರು ಲಂಚ ಬೇಡಿ ಪಡೆದಿರುವ ಬಗ್ಗೆ ಹಾಗೂ ಲಂಚವನ್ನು ಬೇಡಿರುವ ಬಗ್ಗೆ ದೂರನ್ನು ಎಸಿಬಿ ಸಂಸ್ಥೆಗೆ ನೀಡಿ ಅದರ ಬಗ್ಗೆ ಸೂಕ್ತ ಪರಿಹಾರ ಪಡೆದುಕೊಳ್ಳಬಹುದಾಗಿರುತ್ತದೆ. ದೂರುದಾರರು ಕಟ್ಟಡ ರಚನೆ ಪರವಾನಗೆಗೆ ಎಲ್ಲ ದಾಖಲೆಗಳನ್ನು ಸಲ್ಲಿಸಲಾಗಿತ್ತು ಎಂದು ತೋರಿಸಲು ಅವರು ಪರವಾನಗೆಯನ್ನು ಕೋರಿ ಸಲ್ಲಿಸಿದ ಅರ್ಜಿಯಲ್ಲಿ ತೋರಿಸಿರುವುದು ಕಂಡು ಬರುವುದಿಲ್ಲ. ಈ ಹಿನ್ನೆಲೆಯಲ್ಲಿ, ಎದುರುದಾರರು ಕಟ್ಟಡ ಪರವಾನಗೆಯ ಅರ್ಜಿಯನ್ನು ತಿರಸ್ಕರಿಸಲು ಸಕಾರಣಗಳು ಇರಲಿಲ್ಲವೆಂದು ಹೇಳಲು ಬರುವುದಿಲ್ಲ. ಉಳಿದಂತೆ ಮೇಲೆ ಹೇಳಿದಂತೆ ದೂರುದಾರರ ಹೆಸರಿಗೆ ಖಾತೆ ಬದಲಾವಣೆ ಮಾಡದೇ ಇರುವುದು ಕಂಡು ಬರುತ್ತದೆ.

9. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಗ್ರಾಮ ಸಭಾ ಸಾಮಾನ್ಯ ಸಭೆಯಲ್ಲಿ ದಿ:19/06/2014 ರಂದು ವಿಷಯ ಸಂ:15(1)/2014ರ ಠರಾವಿನಂತೆ ದೂರುದಾರರ ಹೆಸರಿಗೆ ಮೇಲೆ ತಿಳಿಸಿದ ಆಸ್ತಿಯ ಖಾತೆ ಬದಲಾವಣೆಗೆ ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 11/4/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 11/4/17